4) ಅರಣ್ಯ ರಕ್ಷಣೆ ಹಿತದೃಷ್ಟಿಯಿಂದ ಗ್ರಾಮೀಣ ಜನತೆಯನ್ನು ಸಕ್ರಿಯವಾಗಿ ಇಲಾಖೆಯೊಂದಿಗೆ ತೊಡಗಿಸಿಕೊಳ್ಳುವಂತೆ ಮಾಡಲು ಗ್ರಾಮೀಣ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ.

5) ಅರಣ್ಯಗಳಲ್ಲಿ ಅಕ್ರಮ ಕಡಿತಲೆಯಾಗುವುದನ್ನು ಹಾಗೂ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯನ್ನು ತಡೆಯಲು ರಾಜ್ಯಾದ್ಯಂತ ವ್ಯಾಪಕ ವೈರ್‌ಲೆಸ್ (ನಿಸ್ತಂತು) ನೆಟ್ ವರ್ಕ್‌ನ್ನು ಸ್ಥಾಪಿಸಲಾಗಿದೆ. ಅಲ್ಲಿದೇ, ಸೂಕ್ಷ್ಮ ಪ್ರದೇಶಗಳಲ್ಲಿ ಅರಣ್ಯ ಉತ್ಪನ್ನಗಳ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ. ರಾಜ್ಯಾದ್ಯಂತ ಇರುವ ಅರಣ್ಯ ಸಂಚಾರಿ ದಳಗಳಿಗೆ ಸಾಕಷ್ಟು ವಾಹನಗಳನ್ನು ಒದಗಿಸಲಾಗಿದೆ. ಕೆಳಹಂತದ ಅರಣ್ಯ ಸಿಬ್ಬಂದಿಗೆ ರಕ್ಷಣಾ ಕೆಲಸವನ್ನು ನಿರ್ವಹಿಸಲುವಾಗ ಜೀವಕ್ಕೆ ಸಂಭವಿಸಬಹುದಾದ ಅಪಾಯದ ಸಂದರ್ಭಗಳನ್ನು ಎದುರಿಸುವ ಸಲುವಾಗಿ ರೈಪಲ್ ಹಾಗೂ ಬಂದೂಕಗಳನ್ನು ಸಹಾ ಆತ್ಮ ರಕ್ಷಣೆಗಾಗಿ ಒದಗಿಸಲಾಗಿದೆ.

6) ಅರಣ್ಯಾಧಾರಿತ ಕೈಗಾರಿಕೆಗಳಿಗೆ ಒದಗಿಸಲಾಗುತ್ತಿರುವ ಅರಣ್ಯ ಕಚ್ಚಾ ವಸ್ತುಗಳ ಪೂರೈಕೆಯನ್ನು (ಸರ್ಕಾರಿ ಆದೇಶ ಸಂಖ್ಯೆ : ಎಫ್‌ಇ 164 ಎಫ್‌ಡಿಪಿ 90 ದಿನಾಂಕ : 10-10-1990 ರಲ್ಲಿ ಪೂರ್ಣವಾಗಿ ನಿಲ್ಲಿಸಲಾಗಿದೆ.

ಅಧ್ಯಕ್ಷರು :- ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ವರದಿಯನ್ನೊಪ್ಪಿಸುವುದು.

3) ವರದಿಯನ್ನೊಪ್ಪಿಸುವುದು.

ಡಾ: ಎಂ. ಪಿ. ಕರ್ಕಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಇಲಾಖಾ ಸಮಿತಿ) :- ಮಾನ್ಯ ಅಧ್ಯಕ್ಷರೇ, ತಮ್ಮ ಆಪ್ಪಣೆಯನ್ನು ಪಡೆದು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ವಾಣಿಜ್ಯ ಮತ್ತು ಕೈಗಾರಿಕಾ ಹಾಗೂ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಇಲಾಖೆಯ 17 ನೇ ಮತ್ತು 18 ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ವರದಿಯನ್ನೊಪ್ಪಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ :- ಇಲಾಖೆಯ ವರದಿಗಳನ್ನು ಕೊಟ್ಟಿದ್ದಾರೆ. ಮೇಲಿನ ಮುದ್ರಣ ಬಹಳ ಚೆನ್ನಾಗಿದೆ. ಒಳಗಡೆ ಯಾವ ಕನ್ನಡಕ ಹಾಕಿದರೂ ಓದುವುದಕ್ಕೆ ಆಗುವುದಿಲ್ಲ. ತರಾತುರಿಯಲ್ಲಿ ಇಂತ ವರದಿಗಳನ್ನು ಏತಕ್ಕೆ ಕೊಡಬೇಕು? ಇದನ್ನೇನು ವರದಿ ಅನ್ನುತ್ತಾರೆಯೇ? ಇಂತಹ ಕಾಟಾಚಾರದ ವರದಿಯನ್ನು ಏತಕ್ಕೆ ಕೊಡಬೇಕು?

(ವರದಿಯ ಪ್ರತಿಯನ್ನು ಹರಿದು ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು.)